

ಮಾತಾಡಿಸಿ ಅವರ ಅನಿಸಿಕೆಗಳನ್ನು ತಿಳಿದುಕೊಂಡು, ಅನಂತರ ಅವರಿಬ್ಬರನ್ನೂ ಜೊತೆಯಾಗಿ ಮಾತಾಡಿಸುವ ಕ್ರಮವನ್ನು ನಾನು ತೆಗೆದುಕೊಂಡೆ. ದಂಪತಿಯಾದರೂ ಅವರಿಬ್ಬರ ಮಧ್ಯದಲ್ಲಿ ಹಂಚಿಕೊಳ್ಳಲಾಗದ ಹಲವಾರು ರಹಸ್ಯಗಳು ಇರುತ್ತವೆ. ಸಾನುಭೂತಿಯಿಂದ ಕೇಳಿಸಿಕೊಂಡಾಗ ಮೂರನೆಯವರ ಮುಂದೆ ಅವರು ಅದನ್ನು ತೋಡಿಕೊಳ್ಳುವ ಸಾಧ್ಯತೆಗಳು ಇರುತ್ತವೆ.

ಮೊದಲಿಗೆ ಪತಿಯನ್ನು ಮಾತ್ರ ಏಕಾಂತದಲ್ಲಿ ಕರೆದು ಮಾತಾಡಿಸಿದೆ. ದೊಡ್ಡ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುವ, ಮೆತ್ತನೆಯ ಧ್ವನಿಯ, ಕಡಿಮೆ ಪದಗಳಲ್ಲಿ ಸಂಗತಿಯನ್ನು ತಿಳಿಸುವ ವ್ಯಕ್ತಿತ್ವ ಅವನದು. ದಪ್ಪನೆಯ ಕನ್ನಡಕವನ್ನು ಹಾಕಿಕೊಂಡು, ದೃಷ್ಟಿಯನ್ನು ನಿರಂತರವಾಗಿ ಅತ್ತಿತ್ತ ಹಾಯಿಸುತ್ತಲೇ ಇದ್ದ ಆತನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವುದು ಬಹಳ ಕಷ್ಟವಾಗುತ್ತಿತ್ತು. ವಯಸ್ಸಿನ ಕಾರಣದಿಂದ ತುಸು ಸ್ಥೂಲಕಾಯನಾಗಿದ್ದ. ಆತನ ಹಣೆಯ ಮೇಲಿನ ಚಿಂತೆಯ ಗೆರೆಗಳು ಎಣಿಸುವಷ್ಟು ಸ್ಪಷ್ಟವಾಗಿದ್ದವು.

'ಹದಿನಾಲ್ಕು ಹದಿನೈದು ವರ್ಷಕ್ಕೆಲ್ಲಾ ನಮ್ಮ ಲೈಂಗಿಕ ಆಶಯಗಳು ಗೊತ್ತಾಗುತ್ತಲ್ಲವೆ? ಕಾಲೇಜು ಮೆಟ್ಟಿಲು ಹತ್ತುವ ವೇಳೆಗಾಗಲೇ ನಿಮಗೆ ಹುಡುಗರ ಆಕರ್ಷಣೆ ಇರುವುದು ಗೊತ್ತಾಗಿರಬೇಕು. ಹಾಗಿದ್ದ ಮೇಲೆ ಹೀಗೆ ಪ್ರೀತಿಸಿ ವಿವಾಹವಾಗುವುದು ಹೇಗೆ ಸಾಧ್ಯವಾಯ್ತು?' ಎಂದು ಕುತೂಹಲದಿಂದ ಕೇಳಿದೆ.

ಎರಡು ಕ್ಷಣ ಸುಮ್ಮನೆ ಇದ್ದ ಆತ ಅನಂತರ ನಿಧಾನಕ್ಕೆ ನಡೆದ ಸಂಗತಿಯನ್ನು ತಿಳಿಸಿದ.

'ಆಗದು ಫ್ಯಾಷನ್ ಆಗಿತ್ತು ಸಾರ್' ಎಂದು ಅಸಹಾಯಕತೆಯಿಂದ ಹೇಳಿದ.

ಕಾಲೇಜು ಹುಡುಗ ಅಂದಮೇಲೆ ಯಾರಾದರೂ ಹುಡುಗಿಯನ್ನು ಪ್ರೀತಿ ಮಾಡಲೇಬೇಕು ಎನ್ನುವ ಒತ್ತಡದ ವಾತಾವರಣ ಅವರ ಕಾಲೇಜಿನಲ್ಲಿತ್ತಂತೆ. ಅವನು ಯೌವನದಲ್ಲಿ ನೋಡಲು ತುಂಬಾ ಸುಂದರನಾಗಿದ್ದ, ಆಕೆಯೂ ಅಂದವಾಗಿದ್ದಳು. ಅವರಿಬ್ಬರ